KARNATAKA LEGISLATIVE ASSEMBLY RESEARCH AND REFERENCE BRANCH
PAPER CLIPPINGS
DATE: 12/7/2019
NAME OF THE NEWS PAPER: ಕನ್ನಡಪ್ರಭ
DEPARTMENT / SUBJECT:

# ರಾಜೀನಾಮೆ ಬಗ್ಗೆ ತರಾತುರಿ ನಿರ್ಧಾರ ಇಲ್ಲ

## ಸಂವಿಧಾನದ ಪ್ರಕಾರ ತೀರ್ಮಾನ | ಸಹಜ, ಸ್ವಯಂಪ್ರೇರಿತವಾಗಿ ನೀಡಿದ್ದಾರಾ ಎಂದು ಪರಿಶೀಲಿಸಿ ನಿರ್ಧರಿಸುವೆ ನಾನು ವಿಳಂಬ ಮಾಡಿಲ್ಲ | ಯಾರನ್ನೋ ಉಳಿಸುವ, ಕಳಿಸುವ ಕೆಲಸ ಮಾಡಲ್ಲ: ಸ್ಪೀಕರ್ ರಮೇಶ್‌ಕುಮಾರ್

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಸುಪ್ರೀಂಕೋರ್ಟ್ ಸೂಚನೆ ಮೇರೆಗೆ ಗುರುವಾರ 10 ಶಾಸಕರು ತಮಗೆ ಸಲ್ಲಿಸಿರುವ ರಾಜೀನಾಮೆ ಪತ್ರವನ್ನು ಸಹಜ ಹಾಗೂ ಸ್ವಯಂಪ್ರೇರಿತವಾಗಿ ನೀಡಿದ್ದಾರೆಯೇ ಎಂಬ ಬಗ್ಗೆ ಪರಿಶೀಲಿಸಿ, ರಾಜೀನಾಮೆಗೆ ಶಾಸಕರು ನೀಡಿರುವುದು ಸಕಾರಣ ಎಂದು ಮನದಟ್ಟು ಮಾಡಿಕೊಂಡ ನಂತರವೇ ಈ ಬಗ್ಗೆ ಸೂಕ್ತ ನಿರ್ಧಾರ ಕೈಗೊಳ್ಳುವೆ ಎಂದು ವಿಧಾನಸಭಾಧ್ಯಕ್ಷ ಕೆ. ಆರ್. ರಮೇಶಕುಮಾರ್ ಸ್ಪಷ್ಟಪಡಿಸಿದ್ದಾರೆ.

ಮುಂಬೈನಿಂದ ವಿಶೇಷ ವಿಮಾನ ನಿಲ್ದಾಣದಲ್ಲಿ ಆಗಮಿಸಿದ 10 ಶಾಸಕರ ರಾಜೀನಾಮೆ ಸ್ವೀಕರಿಸಿದ ನಂತರ ಕಿಕ್ಕಿರಿದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಸ್ತುತ ರಾಜಕೀಯ ಬೆಳವಣಿಗೆ ಹಿನ್ನೆಲೆಯಲ್ಲಿ ಶಾಸಕರು ಸಹಜ ಮತ್ತು ಸ್ವಯಂಪ್ರೇರಿತರಾಗಿ ರಾಜೀನಾಮೆ ನೀಡಿದ್ದಾರೆಯೇ ಎಂಬ ಬಗ್ಗೆ ನಾನು ವ್ಯಾಖ್ಯಾನ ಮಾಡುವುದಿಲ್ಲ. ಆದರೆ ಸಂವಿಧಾನ ಹಾಗೂ ನಿಯಮಾವಳಿ ಪ್ರಕಾರ ವಿಚಾರಣೆ ಮಾಡಿ ತೀರ್ಮಾನ ತೆಗೆದುಕೊಳ್ಳುತ್ತೇನೆ ಎಂದು ಹೇಳಿದರು.

10 ಶಾಸಕರು ನಿಗದಿತ ಪತ್ರದಲ್ಲಿ ರಾಜೀನಾಮೆ ಸಲ್ಲಿಸಿದ್ದಾರೆ. ನಾನು ಕೇಳಿರುವ ಪ್ರಶ್ನೆಗಳಿಗೆ ಉತ್ತರವನ್ನು ನೀಡಿದ್ದಾರೆ. ಆದರೆ ರಾಜೀನಾಮೆ ನೀಡಿಕೆ ಬಗ್ಗೆ ಮನವರಿಕೆ ಮಾಡಿಕೊಳ್ಳಬೇಕಾಗುತ್ತದೆ. ಶಾಸಕರ ರಾಜೀನಾಮೆ ವಿಷಯದಲ್ಲಿ ನಾನು ಯಾವುದೇ ವಿಳಂಬ ಮಾಡಿಲ್ಲ ಅಥವಾ ಯಾರನ್ನೋ ಮೆಚ್ಚಿಸಲು ಸಂವಿಧಾನ ಇಲ್ಲವೇ ನಿಯಮಾವಳಿಗಳಿಗೆ ಅಗೌರವ ತರುವ ರೀತಿಯಲ್ಲಿ ನಡೆದುಕೊಳ್ಳಲು ಆಗುವುದಿಲ್ಲ. ಏಕೆಂದರೆ, ನಾನು ಸಂವಿಧಾನ ಹಾಗೂ ರಾಜ್ಯದ ಜನರ ಹಂಗಿನಲ್ಲಿದ್ದೇನೆ. ಇದರ ಹೊರತಾಗಿ ಮತ್ತ್ಯಾರ ಹಂಗಿನಲ್ಲೂ ಇಲ್ಲ. ಹೀಗಾಗಿ, ಈ ಪ್ರಕರಣ ಬೇಗ ಇತ್ಯರ್ಥವಾಗಬೇಕು ಎಂದು ಯಾರಿಗೋ ಆಸಕ್ತಿ ಇದೆ ಎಂಬ ಕಾರಣಕ್ಕೆ ನಾನು ತರಾತುರಿ ನಿರ್ಧಾರ ಕೈಗೊಳ್ಳಲು ಆಗುವುದಿಲ್ಲ ಎಂದು ಹೇಳಿದರು.



ವಿಧಾನಸೌಧದಲ್ಲಿನ ಕಚೇರಿಗೆ ಆಗಮಿಸಿದ ಸ್ಪೀಕರ್ ರಮೇಶ್ ಕುಮಾರ್

### ವಿಡಿಯೋ ರೆಕಾರ್ಡಿಂಗ್

**ಶಾ**ಸಕರು ರಾಜೀನಾಮೆ ನೀಡುವ ಇಡೀ ಪ್ರಕ್ರಿಯೆಯನ್ನು ವಿಡಿಯೋ ರೆಕಾರ್ಡಿಂಗ್ ಮಾಡಲಾಗಿದೆ. ಇದನ್ನು ಸುಪ್ರೀಂಕೋರ್ಟ್‌ಗೆ ಸಲ್ಲಿಸಲಾಗುವುದು. ಜೊತೆಗೆ ಕೋರ್ಟ್ ನೀಡಿರುವ ಸೂಚನೆಯಲ್ಲಿ ಒಂದು ಶಬ್ದ ಅರ್ಥವಾಗದ ಹಿನ್ನೆಲೆಯಲ್ಲಿ ಈ ಬಗ್ಗೆ ವಿವರಣೆ ಕೇಳಿ ಮನವಿ ಮಾಡಿಕೊಳ್ಳಲು ಉದ್ದೇಶಿಸಿದ್ದೇನೆ ಎಂದು ಹೇಳಿದರು.

### ನಾನು ಯಾವ ತಪ್ಪೂ ಮಾಡಿಲ್ಲ: ಸ್ಪೀಕರ್

**ಶಾ**ಸಕರು ಸಲ್ಲಿಸಿರುವ ರಾಜೀನಾಮೆ ವಿಚಾರದಲ್ಲಿ ನಾನು ವಿಳಂಬಧೋರಣೆತೋರಿದ್ದೇನೆಎಂದುಆರೋಪಿಸಲಾಗುತ್ತಿದೆ. ಆದರೆ, ನಾನು ಇಂತಹ ಯಾವ ನಡವಳಿಕೆಯನ್ನೂ ತೋರಿಸಿಲ್ಲ. ಕಳೆದ ಶನಿವಾರ ರಾಜೀನಾಮೆ ನೀಡಿದ ಶಾಸಕರ ಪೈಕಿ ಎಂಟು ಜನರ ರಾಜೀನಾಮೆ ಪತ್ರಗಳು ಕ್ರಮಬದ್ಧವಾಗಿಲ್ಲ, ಇಚ್ಛೆ ಇದ್ದರೆ ಮತ್ತೊಮ್ಮೆ ಕ್ರಮಬದ್ಧ ರಾಜೀನಾಮೆ ಸಲ್ಲಿಸುವಂತೆ ತಿಳಿಸಲಾಗಿತ್ತು. ಭಾನುವಾರ ಸರ್ಕಾರಿ ರಜೆ, ಸೋಮವಾರ ವೈಯಕ್ತಿಕಕೆಲಸವಿದ್ದಕಾರಣಕಚೇರಿಗೆಬರಲಿಲ್ಲ. ಮಂಗಳವಾರ ಕಚೇರಿಗೆ ಬಂದಿದ್ದೇನೆ. ಕಳೆದ 40 ವರ್ಷಗಳ ಸಾರ್ವಜನಿಕ ಜೀವನದಲ್ಲಿ ಮರ್ಯಾದೆ ಹಾಗೂ ಗೌರವದಿಂದ ಬದುಕು ನಡೆಸುತ್ತಿದ್ದೇನೆ. ಈಗಾಗಲೇ ನನಗೆ 70 ವರ್ಷ, ನೂರು ವರ್ಷ ಬದುಕಬೇಕೆಂಬ ಆಸೆಯೂ ಇಲ್ಲ. ಆದರೆ ನೆಮ್ಮದಿಯಿಂದ ಜೀವನ ಮುಗಿಸ ಬೇಕೆಂದಿದ್ದೇನೆ. ಹೀಗಿರುವಾಗ ಸಭಾಧ್ಯಕ್ಷರು ರಾಜೀನಾಮೆ ಅಂಗೀಕರಿಸುವಲ್ಲಿ ವಿಳಂಬ ಮಾಡುತ್ತಿದ್ದಾರೆ ಎಂಬ ವರದಿ ಸರಿಯಲ್ಲ, ನಾನು ಯಾವುದೇ ತಪ್ಪು ಮಾಡಿಲ್ಲ ಎಂದು ರಮೇಶ್ ಕುಮಾರ್ ಸ್ಪಷ್ಟವಾಗಿ ಹೇಳಿದರು.

ಅಲ್ಲದೆ, ಶಾಸಕರ ರಾಜೀನಾಮೆ ಇಲ್ಲವೇ ಅನರ್ಹತೆ ವಿಷಯಗಳು ಕೆಲವು ರಾಜ್ಯಗಳಲ್ಲಿ ವರ್ಷಗಟ್ಟಲೆ ಎಳೆದಾಡಿ ಇತ್ಯರ್ಥವಾದ ಪ್ರಸಂಗಗಳು ನಡೆದಿವೆ. ಹೀಗಿದ್ದರೂ ಕೇವಲ ಮೂರು ದಿನದಲ್ಲಿ ಈ ವಿಚಾರದಲ್ಲಿ ನಾನು ನಿರ್ಧಾರ ಕೈಗೊಳ್ಳಬೇಕು ಎಂದು ಬಯಸು ವುದು ನ್ಯಾಯಸಮ್ಮತವಲ್ಲ ಎಂದರು. ಇಡೀ ಪ್ರಕ್ರಿಯೆಯಲ್ಲಿ ಯಾರನ್ನೋ ಉಳಿಸುವ ಅಥವಾ ಕಳಿಸುವ ಕೆಲಸಕ್ಕೆ ನಾನು ಕೈಹಾಕುವುದಿಲ್ಲ. ಪ್ರಸಕ್ತ ರಾಜಕೀಯ ಅಸ್ಥಿರತೆಗೆ ನಾನು ಕಾರಣನಲ್ಲ. ಆದರ ಬಗ್ಗೆ ನನಗೆ ಆಸಕ್ತಿಯೂ ಇಲ್ಲ. ಆದರೆ ಜನರಿಗೆ ವಾಸ್ತವ ಸ್ಥಿತಿ ತಿಳಿಸುವುದು ನನ್ನ ಕರ್ತವ್ಯವಾಗಿದೆ ಎಂದರು.

### ಅತೃಪ್ತರ ಬಗ್ಗೆ ಅಸಮಾಧಾನ

**ಕ**ಳೆದ ಶನಿವಾರ ನನಗೆ ಮುಂಚಿತವಾಗಿ ದೂರವಾಣಿ ಕರೆ ಮಾಡದೆ ಅಥವಾ ಪತ್ರ ನೀಡದೇ ಶಾಸಕರು ರಾಜೀನಾಮೆ ಸಲ್ಲಿಸಿದ್ದಾರೆ. ನಾನು ಕಚೇರಿಯಿಂದ ನಿರ್ಗಮಿಸಿದ ನಂತರ ರಾಜೀನಾಮೆ ಪತ್ರ ಸಲ್ಲಿಸಿದ ನಂತರ ರಾಜ್ಯಪಾಲರಿಗೂ ಸಲ್ಲಿಸಿದ್ದಾರೆ. ಈ ರಾಜೀನಾಮೆ ಪತ್ರದ ಬಗ್ಗೆ ಪಾಪ ರಾಜ್ಯಪಾಲರು ಏನು ತಾನೇ ಮಾಡಲು ಸಾಧ್ಯ? ಈ ಬಗ್ಗೆ ಸೂಕ್ತವಾಗಿ ನಿರ್ಧರಿಸಿ ಎಂದು ರಾಜ್ಯಪಾಲರು ನನಗೆ ಪತ್ರ ಬರೆದರು. ಶಾಸಕರ ಈ ನಡವಳಿಕೆ ಅತ್ಯಂತ ಗೌರವಯುತ ಸಂಸ್ಥೆಗೆ ಅಗೌರವ ತಂದಂತಾಗಲಿಲ್ಲವೇ ಎಂದು ರಮೇಶ್ ಕುಮಾರ್ ಅಸಮಾಧಾನ ವ್ಯಕ್ತಪಡಿಸಿದರು. ಇಷ್ಟೇ ಅಲ್ಲ, ಮುಂಬೈಗೆ ಹೋಗಿ ಅಲ್ಲಿ ಪತ್ರಿಕಾ ಗೋಷ್ಠಿ ಮಾಡುತ್ತಾರೆ. ನಂತರ ಸ್ಪೀಕರ್ ರಾಜೀನಾಮೆ ಅಂಗೀಕರಿಸುವಲ್ಲಿ ವಿಳಂಬ ಮಾಡುತ್ತಾರೆ ಎಂದು ಸುಪ್ರೀಂ ಕೋರ್ಟ್‌ಗೆ ಅರ್ಜಿ ಹಾಕುತ್ತಾರೆ. ಕೋರ್ಟ್ ಸಹ ಇಂದು ಆರು ಗಂಟೆಯೊಳಗೆ ರಾಜೀನಾಮೆ ಪತ್ರ ಸ್ವೀಕರಿಸಬೇಕು ಎಂದು ಹೇಳುತ್ತದೆ. ಚುನಾಯಿತ ಸದಸ್ಯರಿಗೆ ನನ್ನ ಭೇಟಿ ಮಾಡಲು ಕೋರ್ಟ್ ಅನುಮತಿ ಬೇಕಿತ್ತಾ? ಈ ವಿಷಯದಲ್ಲಿ ಸುಪ್ರೀಂ ಕೋರ್ಟ್ ಸಹ ಯೋಚಿಸಬೇಕಿತ್ತು ಎಂದು ಬೇಸರ ವ್ಯಕ್ತಪಡಿಸಿದರು.